**Witness duly sworn on 04.04.2026**

**Cross examination by Advocate for Respondent :**

ಲಲಿತಾದ್ರಿಪುರ ಗ್ರಾಮದ ಸರ್ವೆ ನಂಬರ್ 147/4 ಎ ಮತ್ತು 147/4 ಬಿ ನಮ್ಮ ಜಮೀನು ಎಂದರೆ ಸರಿ. ಸದರಿ ಜಮೀನುಗಳಲ್ಲಿ 31 ಗುಂಟೆ ಕ್ಷೇತ್ರವನ್ನು ಸರ್ಕಾರದವರು ಲಾಲ್ ಬಹದ್ದೂರ್ ಶಾಸ್ತ್ರಿ ಬಡಾವಣೆ ಮಾಡುವ ಸಲುವಾಗಿ ಸ್ವಾಧೀನಪಡಿಸಿಕೊಂಡಿದ್ದರು ಎಂದರೆ ಸರಿ. ಸರ್ಕಾರದವರು ನಿಗಧಿ ಮಾಡಿದ್ದ ಪರಿಹಾರ ಸಾಕಾಗುವುದಿಲ್ಲ ಎಂದು ಹೇಳಿ ನಾನು ಸಿವಿಲ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ನ್ಯಾಯಾಲಯ ದಿನಾಂಕ 04.01.2010 ರಂದು ಎಕರೆಗೆ 10,61,000/- ರೂ ನಿಗಧಿ ಮಾಡಿ ಆದೇಶಿಸಿತ್ತು ಎಂದರೆ ಸರಿ. ಆ ರೀತಿ ನ್ಯಾಯಾಲಯವೂ ಮಾಡಿರುವಂತಹ ಆದೇಶ ಸರಿ ಇರುವುದಿಲ್ಲ ಎಂದು ಹೇಳಿ ಮೂಡಾದವರು ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಕರ್ನಾಟಕ ಉಚ್ಚ ನ್ಯಾಯಾಲಯದವರು ಮರುಪರಿಶೀಲನೆ ಮಾಡುವಂತೆ ನ್ಯಾಯಾಲಯಕ್ಕೆ ವಾಪಸ್ಸು ಕಳುಹಿಸಿದ್ದರು ಎಂದರೆ ಸರಿ. ಆ ನಂತರ ಸದರಿ ನ್ಯಾಯಾಲಯವೂ ದಿನಾಂಕ 25.02.2015 ರಂದು ಎಕರೆಗೆ 17,67,767/- ರೂಗಳನ್ನು ನಿಗಧಿಪಡಿಸಿತ್ತು ಎಂದರೆ ಸರಿ. ಸದರಿ ಆದೇಶ ಆದ ಮೇಲೆ ಬಾಕಿ ಬರುವ ಹಣಕ್ಕೆ ಅಮಲ್ಜಾರಿ ಅರ್ಜಿ ಸಂಖ್ಯೆ 615/2015 ಸಲ್ಲಿಸಿದ್ದೆ ಎಂದರೆ ಸರಿ. ಆ ಅಮಲ್ಜಾರಿ ಅರ್ಜಿ ಸಲ್ಲಿಸುವಾಗ ನಮ್ಮ ಪರವಾಗಿ ಸಿ.ಎಂ.ಜಗದೀಶ್ ಎಂಬ ವಕೀಲರನ್ನು ನೇಮಕ ಮಾಡಿಕೊಂಡಿದ್ದೆ. ಆ ಅಮಲ್ಜಾರಿ ಅರ್ಜಿಯಲ್ಲಿ ದಿನಾಂಕ 11.02.2023 ರಂದು ಲೋಕಾದಲತ್ ನಲ್ಲಿ ನಮ್ಮ ಪರವಾಗಿ ಹಾಜರಾಗಿದ್ದ ವಕೀಲರು ಒಂದು ಜಾಯಿಂಟ್ ಮೆಮೋ ಸಲ್ಲಿಸಿ 43,85,385/- ರೂ ಹಣ ಪಡೆದುಕೊಂಡು ಬಾಕಿ ಬರುವುದು ಯಾವುದೂ ಇರುವುದಿಲ್ಲ ಮತ್ತು ಇನ್ನು ಮುಂದೆ ಯಾವುದೇ ಅಪೀಲನ್ನು ಸಲ್ಲಿಸುವುದಿಲ್ಲ ಎಂದು ಹೇಳಿ ನಾನು ಜಾಯಿಂಟ್ ಮೆಮೋ ಗೆ ನನಗೆ ಈಗ ತೋರಿಸಿದ ಸಹಿ ಮಾಡಿದ್ದೆ ಎಂದರೆ ಸರಿ. ಸಾಕ್ಷಿದಾರರು

ನೋಡಿ ಗುರುತಿಸಿದ್ದಂತಹ Ex.No. 615/2015 (LAC.No.314/2005) ರಲ್ಲಿನ ಜಾಯಿಂಟ್ ಮೆಮೋ ವನ್ನು **ನಿ.ಆರ್.1** ಎಂದು ಸಾಕ್ಷಿದಾರರ ಸಹಿಯನ್ನು **ನಿ.ಆರ್.1(ಎ)** ಎಂದು ಗುರುತಿಸಲಾಯಿತು.

ನಿ.ಆರ್.1 ರಲ್ಲಿ ಹೇಳಿದಂತಹ ಹಣವನ್ನು ನಮ್ಮ ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಪಡೆದುಕೊಂಡಿದ್ದೆ ಎಂದರೆ ಸರಿ. ದಿನಾಂಕ 25.02.2015 ರಿಂದ ಈ ಅಪೀಲನ್ನು ಸಲ್ಲಿಸುವವರೆಗೆ, ಮೇಲ್ಮನವಿ ಸಲ್ಲಿಸಲು ನನಗೆ ತೊಂದರೆ ಇರಲಿಲ್ಲ ಏಕೆಂದರೆ ಹುಷಾರು ಇರಲಿಲ್ಲ ಸ್ಟ್ರೋಕ್ ಹೊಡೆದಿತ್ತು. ಅಪೀಲನ್ನು ಸಲ್ಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿಯನ್ನು ಕೊಟ್ಟಿದ್ದೆ. ಅಪೀಲನ್ನು ಸಲ್ಲಿಸುವ ಪೂರ್ವದಲ್ಲಿ ಅಪೀಲಿನ ಮಾಹಿತಿಯನ್ನು ನಮ್ಮ ವಕೀಲರು ನನ್ನ ಗಮನಕ್ಕೆ ತಂದಿದ್ದರು. ನಮ್ಮ ವಕೀಲರು ಅಪೀಲಿನಲ್ಲಿ ಬರೆದಿರುವ ವಿಷಯವನ್ನು ಓದಿ ಹೇಳಿರಲಿಲ್ಲ. ನಾನು ಅಪೀಲಿನ ಜೊತೆಯಲ್ಲಿ ಅಪೀಲನ್ನು ಸಲ್ಲಿಸಲು ವಿಳಂಭ ಆಗಿದೆ ಎಂದು ಹೇಳಿ ಒಂದು ಮಧ್ಯಂತರ ಅರ್ಜಿ ಸಲ್ಲಿಸಿದ್ದು ಆ ಅರ್ಜಿಯ ಜೊತೆಯಲ್ಲಿ ಸಲ್ಲಿಸಿರುವ ಪ್ರಮಾಣ ಪತ್ರಕ್ಕೆ ನನ್ನ ಸಹಿ ಇರುತ್ತದೆ ಎಂದರೆ ಸರಿ. ಪ್ರಮಾಣ ಪತ್ರದಲ್ಲಿ ಹೇಳಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ನಮ್ಮ ವಕೀಲರು ಸಹಿ ಮಾಡು ಎಂದು ಹೇಳಿದ್ದರಿಂದ ಹೆಬ್ಬೆಟಿನ ಗುರುತು ಹಾಕಿದ್ದೆ. ಪ್ರಮಾಣ ಪತ್ರದಲ್ಲಿ ಕೊಟ್ಟಿರುವ ಪರಿಹಾರ ಸಾಕಾಗುವುದಿಲ್ಲ ಹೆಚ್ಚಿನ ಪರಿಹಾರ ಬೇಕು ಎಂದು ಬರೆಸಿರುತ್ತೇನೆ. ಪ್ರಮಾಣ ಪತ್ರದಲ್ಲಿ ನನಗೆ ಹುಷಾರು ಇರಲಿಲ್ಲ ಸ್ಟ್ರೋಕ್ ಹೊಡೆದಿತ್ತು ಎನ್ನುವ ವಿಚಾರವನ್ನು ಹೇಳಿ ಬರೆಸಲು ತೊಂದರೆ ಇರಲಿಲ್ಲ. ನಾನು ನನ್ನ ಪ್ರಮಾಣ ಪತ್ರದಲ್ಲಿ ಪಕ್ಕದ ಜಮೀನವರಿಗೆ ಹೆಚ್ಚಿನ ಪರಿಹಾರ ಕೊಟ್ಟಿರುತ್ತಾರೆ ಆ ವಿಷಯ ಇತ್ತೀಚಿಗೆ ಗೊತ್ತಾಗಿರುತ್ತದೆ ಎಂದು ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ಈ ವಿಷಯವನ್ನು ಬಿಟ್ಟರೆ ನನ್ನ ಪ್ರಮಾಣ ಪತ್ರದಲ್ಲಿ ಬೇರೆ ಕಾರಣ ಹೇಳಿಲ್ಲ ಎಂದರೆ ಸರಿ. LAC.No. 314/2005 ಕೇಸಿನಲ್ಲಿ ನನಗೆ ಎಲ್ಲಾ ಪರಿಹಾರವನ್ನು ಕೊಟ್ಟಿರುವುದರಿಂದ ಈ ಅಪೀಲನ್ನು ಸಲ್ಲಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಎಲ್ಲಾ ಹಣ ತೆಗೆದುಕೊಂಡಿರುವುದರಿಂದ ಅಪೀಲನ್ನು

ಸಲ್ಲಿಸಲು ಯಾವುದೇ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ದುಡ್ಡಿನ ಪ್ರಾಬ್ಲಮ್ ಆಗಿರುತ್ತದೆ. ನಾನು ಮತ್ತು ನನ್ನ ವಕೀಲರು ನಿ.ಆರ್.1 ರಲ್ಲಿ ಸಹಿ ಮಾಡಿ ಎಲ್ಲಾ ಪರಿಹಾರವನ್ನು ಪಡೆದುಕೊಂಡು ಮುಂದೆ ಅಪೀಲನ್ನು ಸಲ್ಲಿಸುವುದಿಲ್ಲ ಎಂದು ಹೇಳಿದ್ದರಿಂದ ಈ ಅಪೀಲು ಸಲ್ಲಿಸಲು ಯಾವುದೇ ಸಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**TYPED TO MY DICTATION IN THE OPEN COURT.**

***R. O. I. & A. C.,***

***IV ADJ.,***
***MYSORE.***